"ಬಿ.ಪಿ., ಶುಗರ್, ಹಾರ್ಟ್, ಲಂಗ್ಸ್... ಎಲ್ಲಾ ನಾರ್ಮಲ್ ಆಗಿದೆ. ಏನೂ ತೊಂದರೆ ಕಾಣಿಸ್ತಿಲ್ಲ. ಎರಡು ಬ್ಲಡ್ ಟೆಸ್ಟ್‌ಗಳ ರಿಪೋರ್ಟು ನಾಳೆ ಬರುತ್ತದೆ. ಅವುಗಳಲ್ಲಿ ಏನಾದರೂ ತೊಂದರೆ ಇದ್ದರೆ ಕರೆಯುತ್ತೇವೆ. ಇಲ್ಲವಾದರೆ ನಿಮಗೆ ರಿಪೋರ್ಟ್ ಮೇಲ್ ಮಾಡಿಬಿಡುತ್ತೇವೆ. ಏನಿವೇ... ಐ ಅಪ್ರಿಷಿಯೇಟ್ ಯುವರ್ ಕಾಶಿಯಸ್‌ನೆಸ್ ಅಬೌಟ್ ಹೆಲ್ತ್. ಎಲ್ಲ ಹೆಂಗಸರೂ ಇದೇ ರೀತಿ ಬಟ್ಟೆ, ಸೀರೆಗೆ ಹಾಕೋ ದುಡ್ಡಲ್ಲಿ ಅರ್ಧ ಹೆಲ್ತ್ ಚೆಕಪ್‌ಗೆ ಹಾಕಿದರೂ ನಮ್ಮ ದೇಶ ಉದ್ಧಾರ ಆಗುತ್ತೆ" ಎಂದು ನಕ್ಕು ಕಳಿಸಿದರು. ಬಿಲ್ ನೋಡಿದ ಸುಜಾತ 'ದೇಶ ಎಷ್ಟು ಉದ್ಧಾರ ಆಗುತ್ತೋ... ಆದರೆ ನಿಮ್ಮ ಆಸ್ಪತ್ರೆಯಂತೂ ಖಂಡಿತ ಉದ್ಧಾರ ಆಗುತ್ತೆ' ಎಂದುಕೊಂಡಳು ಮನದಲ್ಲಿ. ಆದರೂ ಏನೋ ನಿರಾಳತೆ ಇತ್ತು. ಸದ್ಯಕ್ಕಂತೂ ಏನೂ ತೊಂದರೆ ಇಲ್ಲವೆಂದು ಗೊತ್ತಾಯ್ತಲ್ಲ... ಆಶಿಶ್ ಕೂಡ ಕ್ಲಾಸ್ ಮುಗಿಸಿಕೊಂಡು ಕಳವಳದಿಂದ ಅಲ್ಲಿಗೇ ಬಂದ. 'ಎಲ್ಲಾ ನಾರ್ಮಲ್ ಆಗಿದೆ' ಎಂದರಿತು ನಿರಾತಂಕವಾದ. ಮೂವರೂ 'ರಾಜಧಾನಿ' ಹೋಟಲ್‌ನಲ್ಲಿ ಊಟ ಮಾಡಿ ಪಿ.ವಿ.ಆರ್.ನಲ್ಲಿ ಪಿಕ್ಚರ್ ನೋಡಿ ಮನೆ ತಲುಪಿದರು. ಮರುದಿನ ಮರಳಿದ ಸಂಜಯನ ಮುಂದೆ ಎಲ್ಲ ಪ್ರವರ ಒಪ್ಪಿಸಿದ್ದಾಯಿತು. ಆದರೂ ಎಂಟು ದಿನಗಳವರೆಗೆ ಸುಜಾತಳನ್ನು ಕನಸು ಆವರಿಸಿತ್ತು.

ಹದಿನೈದು ದಿನಗಳು ಕಳೆಯುವಷ್ಟರಲ್ಲೇ ಸುಜಾತಳ ಸೋದರತ್ತೆ ಸುಶೀಲ ಅಥಣಿಯಿಂದ ಬಂದಿದ್ದರು. ಆಕೆ ಬಹಳ ಮಡಿವಂತೆ. ಸದಾ ಮಠಮಾನ್ಯಗಳ ಆವರಣದಲ್ಲಿ ಸ್ವಾಮಿಗಳ ಸೇವೆಯಲ್ಲೇ ಇರುತ್ತಿದ್ದರು. ಅಪರೂಪಕ್ಕೆ ಬಂದವರನ್ನು ದಂಪತಿ ಶ್ರೀರಂಗಪಟ್ಟಣ ಮತ್ತು ನಿಮಿಷಾಂಬಾ ದೇವಸ್ಥಾನಗಳಿಗೆ ಕರೆದೊಯ್ದು ತೋರಿಸಿಕೊಂಡು ಬಂದರು. ಮೇಲುಕೋಟೆಯ ಪ್ರವಾಸವೂ ಆಯಿತು. ಸಂತುಷ್ಟರಾದ ಸುಶೀಲ, "ಭೊಲೊ ಯಾತ್ರಾನ ಮಾಡಿಸಿದ್ರಿ" ಎಂದು ಹೊಗಳಿದ್ದೂ ಹೊಗಳಿದ್ದೇ. ಹಳೆಯ ಹರಟೆ, ನಗು ಎಲ್ಲ ಮಿಳಿತವಾಗಿ ಹೊಸತನ ಚಿಮ್ಮಿತು. ಸೋದರತ್ತೆಯ ಪಕ್ಕ ಯಾವ್ಯಾವುದೋ ವಿಷಯಗಳನ್ನು ಪಿಸುಮಾತಿನಲ್ಲೇ ಆಡಿಕೊಳ್ಳುತ್ತ ಮಲಗಿದಾಗ ರಾತ್ರಿಯ ಹನ್ನೆರಡು ಗಂಟೆ. ಹಿಂದಿನ ಹಳವಂಡವನ್ನು ಮರೆತಿದ್ದ ಸುಜಾತಳನ್ನು ಎಚ್ಚರಿಸುವಂತೆ ಅಂದು ರಾತ್ರಿ ಮತ್ತೆ ಕನಸಾಯಿತು. ಅದೇ ವ್ಯಕ್ತಿ.. ಅದೇ ಮೀಸೆ. ಕಂಗಳಲ್ಲಿ ಕಾಠಿಣ್ಯ. ಈ ಬಾರಿ ನಿಂತದ್ದೊಂದು ಕಂದರದ ಪಕ್ಕ. ಹೇಳಿದ್ದು... "ಹ್ಞೂಂ... ದಿನ ಸಮೀಪ ಬಂದಾವ. ಪೆಟಿಗಿ ಕಟ್ಟಿನ್ನ..." ಎನ್ನುತ್ತ ಪಕ್ಕದ ಆಳವಾದ ಕಂದರವನ್ನು ತೋರಿದ. ಭಯಭೀತಳಾಗಿ ತೇಕುತ್ತ ಎದ್ದಳು ಸುಜಾತ. ನಸುಕಿನ ಜಾವ. ಹಕ್ಕಿಗಳು ಚಿಲಿಪಿಲಿಗುಟ್ಟುತ್ತಿದ್ದವು. "ಏನಾತ ಸುಜಿ?..." ಎಂದು ಅತ್ತೆಯೂ ಎದ್ದರು. "ಅತ್ಯಾ..." ಎಂದು ಅಳುತ್ತ ಕನಸಿನ ವೃತ್ತಾಂತವನ್ನೆಲ್ಲ ಹೇಳಿದಳು. ಬೆಳಿಗ್ಗೆ ಎದ್ದು ಬಂದ ಸಂಜಯನೂ ಬಿಟ್ಟಲ್ಲಿ ಸೇರಿಸಿದ. ಎಲ್ಲ ಕೇಳಿದ ಸೋದರತ್ತೆ, "ಹುಚ್ಚಿ... ಇದಕ್ಕೆಲ್ಲ ಡಾಕ್ಟರ್ ಕಡೆ ತೋರಸ್ತಾರೇನು? ನಿನ್ನ ಕುಂಡಲಿ ಎಲ್ಲದ ತಾ ಇಲ್ಲೆ" ಎಂದರು. ಸುಜಾತಳ ಜಾತಕವನ್ನು ತಮ್ಮ ಪುರೋಹಿತರಿಗೆ ವಾಟ್ಸ್‌ಆ್ಯಪ್ ಮಾಡಿದರು. ಮುಂದೆ ಗಂಟೆಹೊತ್ತಿನಲ್ಲೇ ಪರಿಹಾರ ದೊರೆತಿತ್ತು. "ರಾಹು–ಕೇತು ಸಂಧಿ ಅದ. ಶಾಂತಿ ಮಾಡಸ್ಬೇಕು. ಮೃತ್ಯುಂಜಯ ಹೋಮ ಮಾಡಿಸಿದ್ರ ಎಲ್ಲಾ ಪೀಡಾ ಪರಿಹಾರ ಆಗ್ತದ" ಎಂದರಂತೆ ಪುರೋಹಿತರು. ಸುಶೀಲತ್ತೆ, "ಸುಜಿ... ಇಲ್ಲೆ ಬಸವನ ಗುಡ್ಯಾಗ ಹೊಸದಾಗಿ ಪುತ್ತಿಗೆ ಮಠ ಆಗೇದ ನೋಡು. ಅಲ್ಲೆ ನನ್ನ ನಾದಿನಿ ಮಗಾನೇ ಬಂದಾನ. ಎಲ್ಲಾ ಪಾಂಗ್ತಾಗಿ ಮಾಡಿಸಿಕೊಡತಾನ" ಎಂದರು. ಸುಜಾತಳ ರಾವು ಬಡೆದಂಥ ಮುಖ ನೋಡಿ ದೂಸರಾ ಮಾತಾಡದೇ ತಯಾರಾದ ಸಂಜಯ. ಮೂವರೂ ಹೋಗಿ ಕೇಳಿ ಭಾನುವಾರದ ದಿನಾಂಕವನ್ನೂ ನಿಗದಿ ಮಾಡಿ... ಚೀಟಿ ಬರೆಸಿಕೊಂಡು ಬಂದರು. "ಇಷ್ಟೆಲ್ಲಾ ಶಾಂತಿ, ಹೋಮ ಹವನ, ಮಾಡಸ್ಲಿಕ್ಕತ್ತೀ ಸುಜಿ... ಸಮೀಪದ ಬಳಗಾನೂ ಕರದಬಿಡು. ನಾಕ ಮಂದಿಗೆ ಅನ್ನದಾನ ಆಧಂಗ ಆಗ್ತದ. ಎಲ್ಲಾ ಥಣ್ಣಗಾಗ್ತದ" ಎಂದರು. ನಿಜವೆನಿಸಿತು ದಂಪತಿಗೆ. ಬೆಂಗಳೂರಿನಲ್ಲಿದ್ದ ಹತ್ತಿರದ ಬಂಧುವರ್ಗಕ್ಕೆ ಕರೆ ಹೋಯಿತು.